# <u>ಹರಿದಿನದಲಿ ಉಂಡ ನರರಿಗೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 588.
2. **Note:** This song is not available in other standard books that I am referring.
3. **Note:** Singer has followed these lyrics.

ರಾಗ: ಕಾಂಭೋಜಿ ತಾಳ: ಆದಿ

ಹರಿ ದಿನದಲಿ ಉಂಡ ನರರಿಗೆ ಘೋರ
ನರಕ ತಪ್ಪದು ಎಂದು ಶ್ರುತಿ ಸಾರುತಲಿದೆ ॥ p ॥

ಗೋವು ಕೊಂದ ಪಾಪ ವಿಪ್ರರ ಸಾವಿರ
ಜೀವ ಹತ್ಯವ ಮಾಡಿದ ಪಾಪವು
ಭಾವಜನಯ್ಯನ ದಿನದಿ ಉಂಡವರನು
ಕೀವಿನೊಳಗೆ ಹಾಕಿ ಕುದಿಸುವ ಯಮನು ॥ 1 ॥

ಒಂದೊಂದು ಅಗುಳಿಗೆ ಕೋಟಿ ಕೋಟಿ ಕ್ರಿಮಿಗಳು
ಅಂದಿನ ಅನ್ನವು ನಾಯಿ ಮಾಂಸವು
ಮಂದರೋದ್ಧಾರನ ದಿನದಿ ಉಂಡವರನ್ನು
ಹಂದಿಯ ಸುಡುವಂತೆ ಸುಡಿಸುವ ಯಮನು ॥ 2 ॥

ಅನ್ನ ಪಾನ ತಾಂಬೂಲ ದರ್ಪಣಗಳು
ಚೆನ್ನ ವಸ್ತ್ರಗಳೆಲ್ಲ ವರ್ಜಿತವು
ತನ್ನ ಸತಿಯರ ಸಂಗ ಮಾಡಿದ ನರರಿಗೆ
ಬೆನ್ನಲಿ ಕರುಳ ತೆಗೆವ ಕಂಡ್ಯ ಯಮನು ॥ 3 ॥

ಜಾವದ ಜಾಗರ ಕ್ರತು ನಾಲ್ಕು ಸಾವಿರ
ಜಾವ ನಾಲ್ಕರ ಫಲಕೆ ಮಿತಿಯಿಲ್ಲವು
ದೇವ ದೇವನ ದಿನದಿ ನಿದ್ರೆ ಗೈವನ
ಕಾವಲಿಯೊಳು ಹಾಕಿ ಹುರಿಸುವ ಯಮನು ॥ 4 ॥

ಇಂತು ಏಕಾದಶಿ ಉಪವಾಸ ಜಾಗರ
ಸಂತತ ಕ್ಷೀರಾಬ್ಧಿ ಶಯನನ ಪೂಜೆ
ಸಂತುಷ್ಟಿಯಿಂದಲಿ ಮಾಡಿದ ಜನರಿಗೆ
ಅತ್ಯಂತ ಫಲವೀವ ಪುರಂದರ ವಿಠಲ ॥ 5 ॥

**Classification:** Keerthane
**Ankita:** purandara vittala
**Location:** NA
**Category:** Jeevana Sambodhane, Garuda Purana Vichara
**Sub-Category:** Krishna, oota, nara, naraka, shruti, govu, papa, brahmana, jiva, yama, anna, krimi, nayi, dina, upavasa, Ekadashi, handi, vastra, patni, deva, nidde, puje, jana, phala,
**Pravachana:** NA
**Explanation:** NA